ಸುತರಾಂ ಇಷ್ಟ ಇರಲಿಲ್ಲ. ಬಾಯಲ್ಲಿ ಏನೇ ಅಂದರೂ ದುಡ್ಡು ಯಾರಿಗೆ ಕಹಿ? ಅದೂ ತಮ್ಮ ರಾಧತ್ತೆ ಇಡೀ ಜೀವಮಾನ ದುಡಿದು ಸಂಪಾದಿಸಿಟ್ಟಿದ್ದು? ಅವಳೇನೋ ಮಹಾ ಬುದ್ಧಿವಂತೆ ಅಂದುಕೊಂಡಿದ್ದು ಸುಳ್ಳಾಯ್ತು. ತನ್ನ ಮನಸ್ಸಿನಲ್ಲಿದ್ದುದನ್ನು ಯಾಕೆ ಕಾನೂನು ಪ್ರಕಾರ ಕಾರ್ಯರೂಪಕ್ಕಿಳಿಸಲಿಲ್ಲ ರಾಧತ್ತೆ? ಒಂದು ವಿಲ್ ಬರೆದಿಡಲು ಯಾವ ಅಡ್ಡಿ ಇತ್ತು? ತಾಳಿ ಕಟ್ಟಿದವನೇ ಸತ್ತ ಮೇಲೆ ಅಲ್ಲಿಯ ಸಂಪರ್ಕ ಸಂಪೂರ್ಣ ಕಡಿದು ಹೋಯ್ತು ಎನ್ನುವ ಕಾನೂನಿನ ಅರಿವಿನ ಕುರಿತಾದ ಅಜ್ಞಾನವೇ? 'ಬರೆದರಾಯ್ತು' ಎನ್ನುವ ಧೋರಣೆಯೇ? ತಾನು ಇಷ್ಟು ಬೇಗ ಸಾಯುವುದಿಲ್ಲ ಎನ್ನುವ ನಂಬಿಕೆ? ಅಷ್ಟೆಲ್ಲಾ ಓದಿಕೊಂಡ ರಾಧತ್ತೆ ಈ ವಿಷಯದಲ್ಲಿ ಅಜ್ಞಾನಿಯಾಗಿದ್ದಳು ಎಂದು ಯಾರೂ ನಂಬಲು ಸಿದ್ಧರಿಲ್ಲ. ಇದೊಂದು ನಿರ್ಲಕ್ಷ್ಯ ಧೋರಣೆ. 'ಬರೆದರಾಯ್ತು' ಎನ್ನುವ ವಿಳಂಬನೀತಿ. ಈಗಷ್ಟೇ ನೆಲೆ ಬದಲಿಸಿ ಹೊಂದಿಕೊಳ್ಳುವುದರಲ್ಲಿದ್ದಳು ರಾಧತ್ತೆ. ಇನ್ನೊಂದಷ್ಟು ಕಾಲ ಕಳೆದಿದ್ದರೆ ಕಾನೂನುಪ್ರಕಾರವಾಗಿ ಎಲ್ಲವನ್ನೂ ಮಾಡಿಡುತ್ತಿದ್ದಳೇನೋ. ಮಿಂಚಿ ಹೋಯ್ತು ಕಾಲ. ರಾಧತ್ತೆಯ ಜೀವಮಾನದ ಶ್ರಮವೆಲ್ಲಾ ಅವಳ ಬದುಕನ್ನು ಹಾಳುಗೆಡವಿದವರ ಪಾಲಾಗುತ್ತದೆ ಅಂದರೆ ಇದಕ್ಕಿಂತಾ ದುರಂತ ಮತ್ತೇನಿರಲು ಸಾಧ್ಯ? ವಯಸ್ಸಲ್ಲದ ವಯಸ್ಸಿನಲ್ಲಿ ಎಷ್ಟೋ ಜನ ಸಾಯುವುದನ್ನು ಕಣ್ಣಾರೆ ಕಂಡರೂ, ಕೇಳಿದರೂ, ತಮ್ಮ ಸಾವು ಅಷ್ಟು ಬೇಗ ಬಾಗಿಲಿಗೆ ಬಂದು ನಿಲ್ಲುವುದಿಲ್ಲ ಅಂದುಕೊಳ್ಳುವುದು ಮನುಷ್ಯಮಾತ್ರರ ದೌರ್ಬಲ್ಯವೇ? ಹಾಗೆಂದುಕೊಳ್ಳುತ್ತಾ ಸಾವಿನ ಯೋಚನೆಯನ್ನು ದೂರ ಇರಿಸುವ ಮನಸ್ಸಿನ ಹುನ್ನಾರವೇ? ಎದೆ ಒಡೆದುಕೊಂಡು ಕೊರಗುತ್ತಿದ್ದ ಅಪ್ಪನನ್ನು ಸಂತೈಸಬೇಕಾದ ಕರ್ತವ್ಯ ಒಂದು ಕಡೆ. 'ಕೈಗೆ ಬಂದಿದ್ದು ಬಾಯಿಗೆ ಬರಲಿಲ್ಲ' ಅನ್ನುವಂತೆ ಕಾನೂನಿನ ಕಾರಣದಿಂದ ಎಲ್ಲವನ್ನೂ ಕಳೆದುಕೊಳ್ಳಬೇಕಾದ ಪ್ರಸಂಗ ತಂದೊಡ್ಡಿರುವ ಮರ್ಮಾಘಾತ ಮತ್ತೊಂದು ಕಡೆ. ಮಾಧವ ಅರೆಸತ್ತವನಂತಾಗಿದ್ದ. ಕೇಶವನೂ...

★★★

ಸಣ್ಣದೊಂದು ಆಶಾಕಿರಣದ ಬೆನ್ನು ಬಿದ್ದು ಅಣ್ಣತಮ್ಮಂದಿರು ಪ್ರಸಿದ್ಧ ವಕೀಲರೊಬ್ಬರನ್ನು ಸಂಪರ್ಕಿಸಿದರು. ಕಾನೂನಿನಲ್ಲಿ ಇರಲಿಲ್ಲ ಗೋಜಲು. ಸ್ಪಷ್ಟವಾಗಿತ್ತು ಹಕ್ಕುದಾರಿಕೆಯ ವಿವರ. ಗಂಡ, ಮಕ್ಕಳಿಲ್ಲದ ರಾಧತ್ತೆಯ ಸ್ವಯಾರ್ಜಿತ ಆಸ್ತಿಗೆ, ಅವಳು ವಿಲ್ ಮಾಡಿಡದೆ ಮೃತಪಟ್ಟಿದ್ದರೆ, ಕಾನೂನಿನ ಪ್ರಕಾರ ಗಂಡನ ತಾಯಿ, ಮಕ್ಕಳು, ಮೊಮ್ಮಕ್ಕಳು ಹಕ್ಕುದಾರರು.

"ಸಮಾಧಾನದಿಂದ ಕೂತು ಮಾತಾಡಿ ಸಮಸ್ಯೆ ಬಗೆ ಹರಿಸ್ಕೊಳ್ಳಿ. ದೊಡ್ಡ ಮನಸ್ಸು ಮಾಡಿ ಅವರು ಏನಾದ್ರೂ ಕೊಟ್ಟರೂ ಕೊಡಬಹುದು" ಅಂದರು ವಕೀಲರು. ಅದು ಈ ಜನ್ಮದಲ್ಲಿ ಸಾಧ್ಯವಿಲ್ಲ ಎಂದು ಪರಸ್ಪರ ಮಾತಾಡಿಕೊಳ್ಳದೆಯೇ ಕೇಶವ, ಮಾಧವ ಅರ್ಥೈಸಿಕೊಂಡರು.

## ವಸುಮತಿ ಉಡುಪ

ಹೊಸನಗರ ತಾಲ್ಲೂಕಿನ ನಗರ ಹುಟ್ಟೂರು. ಮೈಸೂರಿನಲ್ಲಿ ವಾಸ. 'ಪರಿವರ್ತನೆ', 'ಸಂಬಂಧಗಳು', 'ಅನವರತ', 'ಅವ್ಯಕ್ತ', 'ಮನ್ವಂತರ' ಸೇರಿದಂತೆ 11 ಕಾದಂಬರಿಗಳನ್ನು, 'ಬಂದನಾ ಹುಲಿರಾಯನು', 'ವಿಕಲ್ಪ', 'ಶೇಷ ಪ್ರಶ್ನೆ' ಸೇರಿದಂತೆ 21 ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. ಐದು ಪ್ರಬಂಧ ಸಂಕಲನಗಳು ಪ್ರಕಟವಾಗಿವೆ. ಸಮಗ್ರಕತೆಗಳ ಸಂಕಲನ 'ಕಥಾವಸಂತ' ಮೂರು ಭಾಗಗಳಲ್ಲಿ ಪ್ರಕಟಗೊಂಡಿದೆ.